Date : 19-9-2015

# ಭಾರತದ ಕಾಳುಮೆಣಸಿನ ದರ ಹೆಚ್ಚಳವಿರುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿಲ್ಲ

ಇತರ ಜಾಗತಿಕ ದೇಶಗಳಿಗೆ ಹೋಲಿಸಿದಾಗ ಭಾರತೀಯ ಕಾಳುಮೆಣಸಿನ ದರ ಹೆಚ್ಚಳವಿದ್ದು, ಸ್ಪರ್ಧಾತ್ಮಕವಾಗಿಲ್ಲ. ಇಂಡೋನೇಶಿಯಾ, ಶ್ರೀಲಂಕಾ ಮತ್ತು ಬ್ರೆಜಿಲ್‌ನ ಕಾಳುಮೆಣಸಿನ ದರ ಜಾಗತಿಕ ಮಾರುಕಟ್ಟೆಯಲ್ಲಿ 9300–9900 ಡಾಲರ್ ಇದ್ದು, ಭಾರತೀಯ ಕಾಳುಮೆಣಸಿನ ದರ 10300 ಡಾಲರ್ ಇದೆ. 2014–15ರ ಭಾರತೀಯ ಕಾಳುಮೆಣಸು ರಫ್ತು 21450 ಟನ್‌ಗಳಾಗಿದ್ದು, ರೂ.1208 ಕೋಟಿ ಮೌಲ್ಯ ಗಳಿಸಿದೆ. ಇದು ಗಾತ್ರದಲ್ಲಿ ಗಣನೀಯ ಹೆಚ್ಚಳವಾಗಿ ಗಳಿಕೆಯಲ್ಲಿ 29 ಶೇಕಡಾ ಹೆಚ್ಚಳ ಕಂಡಿದೆ.

ಇಂಡೋನೇಶಿಯಾದ ಹೊಸ ಬೆಳೆಯ ಕಾಳುಮೆಣಸು ಕಟಾವು ಪೂರ್ಣಗೊಂಡಿದ್ದು ಈಗ ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟ ಒತ್ತಡ ನಿರೀಕ್ಷಿತವಾಗಿದೆ. ಇಂಡೋನೇಶಿಯಾದ ಕಾಳುಮೆಣಸಿನ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಸುಮಾರು 8000 ಟನ್‌ಗಳ ಹೆಚ್ಚಳ ಕಂಡಿದೆ. ಬ್ರೆಜಿಲಿನ ಹೊಸ ಬೆಳೆಯ ಕಾಳುಮೆಣಸು ಉತ್ಪಾದನೆ ಅಷ್ಟು ಚೆನ್ನಾಗಿಲ್ಲವೆಂದು ಅಂದಾಜಿಸಿದ್ದು ಮುಂದಿನ ದಿನಗಳಲ್ಲಿ ಕಾಳುಮೆಣಸು ದರ ಉತ್ತಮವಿರುವ ಸಾಧ್ಯತೆ ಇದೆ. ಜಾಗತಿಕ ಅತೀ ಹೆಚ್ಚು ಉತ್ಪಾದಿಸುವ ಮತ್ತು ರಫ್ತು ಮಾಡುವ ದೇಶವಾದ ವಿಯೆಟ್ನಾಂನ ಕಾಳುಮೆಣಸು ಹೆಚ್ಚಿನಪಾಲು ಮಾರಾಟ ಮಾಡಿದೆಯೆನ್ನಲಾಗಿದೆ.

ಭಾರತೀಯ ಕಾಳುಮೆಣಸಿನ ಉತ್ಪಾದನೆ ಇಮ್ಮಡಿಯಾಗಿ 70000 ಟನ್‌ಗಳಾಗಬಹುದೆಂದು ಇಂಟರ್‌ನೇಶನಲ್ ಪೆಪ್ಪರ್ ಕಮ್ಯುನಿಟಿ ಅಂದಾಜಿಸಿದೆ. ಇದರಲ್ಲಿ ಕೇರಳದ ಪೂರೈಕೆ ಬಡವಾಗಿದ್ದು, ಕರ್ನಾಟಕ ಪ್ರಮುಖ ಉತ್ಪದನಾ ರಾಜ್ಯವಾಗಲಿದೆ. ದರ ಗಳಿಕೆಯಿಲ್ಲ ಕೇರಳದ ಕಾಳುಮೆಣಸು ಮುಂದಿದೆ.